ದಿನಾಂಕಃ **02.11.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಸ್ ಆರ್ ವಿ ವಕೀಲರಿಂದಃ**

ಪ್ರತಿವಾದಿಯರು ನಿವೇಶಗಳನ್ನು ಮಾರಾಟ ಮಾಡುತ್ತಾರೆ ಎಂಬುದು ನಿಮಗೆ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿ ನಮ್ಮ ಸಂಬಂಧಿಕರಾದ ಸೂರ್ಯನಾರಾಯಣ ರವರು ನನಗೆ ಆ ಬಗ್ಗೆ ತಿಳಿಸಿದರು ಎಂದು ಉತ್ತರಿಸುತ್ತಾರೆ. ಕರಾರು ಪತ್ರ ನೋಂದಣಿ ಆಗುವುದಕ್ಕಿಂತ 2 ತಿಂಗಳ ಮುಂಚೆ ಅಂದರೆ ಜನೆವರಿ ತಿಂಗಳಿನಲ್ಲಿ ಹೇಳಿದರು. ನಿವೇಶಗಳನ್ನು ಸೂರ್ಯನಾರಾಯಣ ರವರು ತೋರಿಸಿದರು. ಆ ಸಂದರ್ಭದಲ್ಲಿ ನಿವೇಶನಗಳ ಖಾತೆ ಇನ್ನೂ ಆಗಿರಲಿಲ್ಲ ಖಾತಾ ಮಾಡಿಸಿಕೊಡುವುದಾಗಿ ಹೇಳಿದ್ದರು. ಈಗಲಾದರೂ ಆ ನಿವೇಶನಗಳ ಖಾತೆ ಆಗಿದೆಯಾ ಎಂದರೆ ಸಾಕ್ಷಿ ಖಾತೆ ಆಗಿಲ್ಲ, ಅಲಿನೇಶನ್ ಆಗಿದೆ ಎಂದು ಉತ್ತರಿಸುತ್ತಾರೆ. ಸದರಿ ನಿವೇಶನಗಳ ಖಾತೆ ಅವರ ಖಾತೆ ಸಾವಿತ್ರಮ್ಮನವರ ಹೆಸರಿಗೆ ಆಗಬೇಕಾಗಿತ್ತು. ದಾವಾ ದಾಖಲಿಸುವ ಸಮಯದಲ್ಲಿ ದಾವಾ ಸ್ವತ್ತಿನ ಖಾತೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಇಲ್ಲ, ಖಾತೆ ಆಗಿರಲಿಲ್ಲ ಎಂದು ಉತ್ತರಿಸುತ್ತಾರೆ. ಜಿ ಪಿ ಎ ಪ್ರಕಾರ ಮಂಜುನಾಥರವರ ಹೆಸರಿಗೆ ಖಾತೆ ಆಗಿದೆಯಾ ಎಂದರೆ ಸಾಕ್ಷಿ ಈಗಿನ ವಸ್ತುಸ್ಥಿತಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈಗಲಾದರೂ ನೀವು ಮುನ್ಸಿಪಲ್ ಕಛೇರಿಗೆ ಹೋಗಿ ವಿಚಾರಿಸಿ ಖಾತೆ ಪಹಣಿ ಪಡೆದು ಹಾಜರುಪಡಿಸಬಹುದಾ ಎಂದರೆ ಸಾಕ್ಷಿ ಖಾತೆ ಆಗಿಲ್ಲ, ನಕ್ಷೆ ಆಗಿದೆ ಅದರ ನಂಃ 3/2019 20 ಎಂದು ಉತ್ತರಿಸುತ್ತಾರೆ.

ನಿವೇಶನ ಖರೀದಿ ಮಾತುಕತೆ ಎಲ್ಲಿ ಆಗಿತ್ತು ಎಂದರೆ ಸಾಕ್ಷಿ ತಾಲೂಕು ಕಛೇರಿ ಮುಂಭಾಗದ ಸಪ್ಪಳಮ್ಮ ದೇವಸ್ಥಾನದ ಬಳಿ ಆಯಿತು ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ಮಂಜುನಾಥರವರ ಅಣ್ಣ ತಮ್ಮಂದಿರು, ತಂಗಿ ಮತ್ತು ಅವರ ತಾಯಿ ಬಂದಿದ್ದರಾ ಎಂದರೆ ಸಾಕ್ಷಿ ಇಲ್ಲ ಜಿಪಿಎ ಕೊಟ್ಟಿದ್ದರು ಎಂದು ಉತ್ತರಿಸುತ್ತಾರೆ. ಸಾವಿತ್ರಮ್ಮನವರು ಯಾವ ಉದ್ದೇಶಕ್ಕೆ

ಮಂಜುನಾಥರವರಿಗೆ ಜಿಪಿಎ ಕೊಟ್ಟಿದ್ದರು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ, ಅವರಿಗೆ ವಯಸ್ಸಾಗಿತ್ತು ಎಂದು ಉತ್ತರಿಸುತ್ತಾರೆ. ಯಾವ ಉದ್ದೇಶಕ್ಕೆ ಮಂಜುನಾಥರವರು ನಿವೇಶನಗಳನ್ನು ಮಾರಾಟ ಮಾಡವುದಾಗಿ ಹೇಳಿದರು ಎಂದರೆ ಸಾಕ್ಷಿ ಕುಟುಂಬದ ಅವಶ್ಯಕತೆಗಳಿಗಾಗಿ ಎಂದು ಹೇಳಿದರು ಎಂದು ಉತ್ತರಿಸುತ್ತಾರೆ. ಆ ಅವಶ್ಯಕತೆಳು ಏನು ಎಂಬುದು ನಿಮಗೇನು ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಮಂಜುನಾಥರವರ ಬಹಳ ವರ್ಷಗಳಿಂದ ಚಿತ್ರದುರ್ಗದಲ್ಲಿ ವಾಸವಿದ್ದು ಮಕ್ಕಳ ವಿದ್ಯಾಭ್ಯಾಸ ಮಾಡಿಸುತ್ತಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸಾವಿತ್ರಮ್ಮನವರು ಮಂಜುನಾಥರವರಿಗೆ ಕೇವಲ ಅಲಿನೇಶನ್ ಮತ್ತು ಪ್ಲಾನ್ ಅಪ್ರೂವಲ್ ಮಾಡಿಸುವ ಉದ್ದೇಶಕ್ಕೆ ಮಾತ್ರ ಜಿಪಿಎ ಬರೆದುಕೊಟ್ಟಿದ್ದು, ನಿವೇಶನಗಳನ್ನು ಮಾರಾಟ ಮಾಡಲು ಜಿ ಪಿ ಎ ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿ ಜಿಪಿಎ ನಕಲಿನಲ್ಲಿ ಅದಲ್ಲವನ್ನು ಬರೆಯಲಾಗಿದೆ ಎಂದು ಉತ್ತರಿಸುತ್ತಾರೆ. ಮಂಜುನಾಥರವರು ನಿವೇಶನಗಳನ್ನು ಮಾರಾಟ ಮಾಡುವ ಉದ್ದೇಶವು ಇರಲಿಲ್ಲ, ಅವಶ್ಯಕತೆಯೂ ಇರಲಿಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇತ್ತು ಎಂದು ಉತ್ತರಿಸುತ್ತಾರೆ. ಏನು ಅವಶ್ಯತೆ ಇತ್ತು ಎಂದರೆ ಸಾಕ್ಷಿ ಮಂಜುನಾಥರವರ ಸಹೋದರಿಯ ಮಗಳ ಮದುವೆಗೆ ಹಣದ ಅವಶ್ಯಕತೆ ಇತ್ತು ಎಂದು ಹೇಳಿದ್ದರು ಎಂದು ಉತ್ತರಿಸುತ್ತಾರೆ. ಪಾವಗಡದಲ್ಲಿಯೇ ಮಂಜುನಾಥರವರಿಗೆ ಸುಮಾರು 20 ಎಕರೆ ಜಮೀನು ಇದೆ ಎಂದರೆ ಸಾಕ್ಷಿ ಎಷ್ಟು ಎಕರೆ ಎಂದು ಗೊತ್ತಿಲ್ಲ ಆದರೆ ಅವರಿಗೆ ಜಮೀನು ಇದೆ ಎಂದು ಉತ್ತರಿಸುತ್ತಾರೆ.

ಸಪ್ಪಳಮ್ಮ ದೇವಸ್ಥಾನದ ಮುಂದೆ ನಿವೇಶನದ ಖರೀದಿ ಮಾತುಕತೆ ಮದಾಹ್ನ 3.30 ರಿಂದ 4.10 ಗಂಟೆ ವರೆಗೆ ಮಾತುಕತೆ ಆಯಿತು. ಮಾತುಕತೆ ದಿಃ 08.02.2021 ಆಗಿರುತ್ತದೆ. ಮಾತುಕತೆ ರೂ.15 ಲಕ್ಷದ 10 ಸಾವಿರಗಳಿಗೆ ಆಯಿತು. ಮಾತುಕತೆ ಪೂರ್ತಿಯಾದ ನಂತರ ಅದೇ ಸಮಯಕ್ಕೆ ರೂ.15 ಲಕ್ಷಗಳನ್ನು ನಾನು ಮಂಜುನಾಥರವರಿಗೆ ಕೊಟ್ಟಿರುತ್ತೇನೆ. ಸದರಿ ರೂ.15 ಲಕ್ಷಗಳನ್ನು ರೂ.500 ಮುಖಬೆಲೆಯ ಒಟ್ಟು 30 ಕಟ್ಟುಗಳಲ್ಲಿ ಕೊಟ್ಟಿರುತ್ತೇನೆ. ಮಂಜುನಾಥರವರು

ಮತ್ತು ಅಲ್ಲಿ ಇದ್ದವರು ಸದರಿ 30 ಕಟ್ಟುಗಳನ್ನು ಲೆಕ್ಕಹಾಕಿಕೊಂಡರು. 3.30 ರಿಂದ 4.10 ಸಮಯದ ನಡುವೆ ಕ್ರಯದ ಮಾತುಕತೆ ಆಗಿ ಆ ಸಮಯದಲ್ಲಿಯೇ ಹಣವನ್ನು ಸಹ ಲೆಕ್ಕ ಹಾಕಿಕೊಂಡಿರುತ್ತಾರೆ. ಮಾತುಕತೆ ಆಗುವ ಮೊದಲೇ ಪತ್ರವನ್ನು ರೆಡಿ ಮಾಡಲಾಗಿತ್ತು ನಂತರ ದುಡ್ಡು ಕೊಟ್ಟ ಮೇಲೆ ಅವರು ಪತ್ರಕ್ಕೆ ಸಹಿ ಮಾಡಿದರು. ಡ್ರಾಫ್ಟ ಅನ್ನು 3.00 ಗಂಟೆಗೆ ರೆಡಿ ಮಾಡಲಾಯಿತು. ಸ್ಟಾಂಪ್ ಪೇಪರ್ ಮೇಲೆ ಡ್ರಾಫ್ಟ ಮಾಡಲಾಯಿತು. ಒಟ್ಟು ರೂ.500 ಗಳ ಸ್ಟಾಂಪ್ ಪೇಪರ್ ಮೇಲೆ ಕರಾರನ್ನು ಡ್ರಾಫ್ಟ ಮಾಡಲಾಗಿತ್ತು. ಸದರಿ ಸ್ಟಾಂಪ್ ಪೇಪರ್ ಮೇಲೆ ಮಂಜುನಾಥರವರು ಟೈಪ್ ಮಾಡಿಸಿಕೊಂಡು 3.15 ಗಂಟೆ ಸಮಯಕ್ಕೆ ಬಂದರು. ಮಂಜುನಾಥರವರು ಬಹಳ ಕುಡಿಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನೀವು ಮತ್ತು ಸೂರ್ಯನಾರಾಯಣ ರವರು ಸೇರಿ ಮಂಜುನಾಥರವರಿಗೆ ಚೆನ್ನಾಗಿ ಕುಡಿಸಿ ಮೋಸದಿಂದ ಸ್ಟಾಂಪ್ ಪೇಪರಗಳ ಮೇಲೆ ಅವರ ಸಹಿ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಸುಳ್ಳು, ನಾನು ಉಪನ್ಯಾಸಕರಾಗಿ ಆ ರೀತಿ ಮಾಡುವುದಿಲ್ಲ ಎಂದು ಉತ್ತರಿಸುತ್ತಾರೆ. ಮಂಜುನಾಥರವರು ಅಗ್ರಿಮೆಂಟಗೆ 4.00 ಗಂಟೆ ಸಮಯದಲ್ಲಿ ಸಹಿ ಮಾಡಿರುತ್ತಾರೆ. ನೀವು ಸಾಕ್ಷಿಗಳ ಸಮಕ್ಷಮದಲ್ಲಿ ದುಡ್ಡು ಕೊಟ್ಟಿಲ್ಲ, ನೀವು ಹಾಗೂ ಸಾಕ್ಷಿಗಳು ಸೇರಿ ಕರಾರನ್ನು ಸೃಷ್ಟಿ ಮಾಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ದುಡ್ಡನ್ನು ಸಾಕ್ಷಿಗಳ ಮುಂದೆ ಕೊಟ್ಟಿದ್ದೀರಾ ಅಥವಾ ಸಬ್ ರಜಿಸ್ಟ್ರರ್ ಮುಂದೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಸಾಕ್ಷಿಗಳ ಮುಂದೆ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಸಬ್ ರಜಿಸ್ಟ್ರರ್ ಕಛೇರಿಗೆ 4.20 ಗಂಟೆಗೆ ಹೋಗಿರುತ್ತೇವೆ. ಸದರಿ ಕಛೇರಿಗೆ ನಾನು, ಮಂಜುನಾಥ, ಸೂರ್ಯನಾರಾಯಣ, ವಿರೇಶ ಮತ್ತು ರಾಮಚಂದ್ರಪ್ಪ ಹೋಗಿರುತ್ತೇವೆ. ಸದರಿ ಕರಾರನ್ನು ಸಬ್ ರಜಿಸ್ಟ್ರರ್ ರವರ ಮುಂದೆ ವಿರೇಶ್ ರವರು ಸುಮಾರು 4.25 ಗಂಟೆ ಸಮಯಕ್ಕೆ ಹಾಜರುಪಡಿಸಿರುತ್ತಾರೆ. ಸುಮಾರು 4.47 ಗಂಟೆ ಸಮಯಕ್ಕೆ ಕರಾರು ನೋಂದಣಿಯಾಗಿತ್ತು. ನೋಂದಣಿ ಎಷ್ಟು ಗಂಟೆಗೆ ಪೂರ್ತಿ ಆಗಿರುತ್ತದೆ ಎಂದರೆ ಸಾಕ್ಷಿ ಸುಮಾರು 5 ಗಂಟೆಯ ಒಳಗೆ ಪೂರ್ತಿಯಾಗಿರುತ್ತದೆ ಎಂದು ಉತ್ತರಿಸುತ್ತಾರೆ. ನೀವು ಆ ದಿನ

ಮಂಜುನಾಥರವರಿಗೆ ಯಾವುದೇ ದುಡ್ಡು ಕೊಟ್ಟಿಲ್ಲ, ಅವರಿಗೆ ಚೆನ್ನಾಗಿ ಕುಡಿಸಿ ನೀವು ಮತ್ತು ಸಾಕ್ಷಿದಾರರು ಸೇರಿ ಕರಾರಿಗೆ ಸಹಿ ಮಾಡಿಸಿ ನಂತರ ಸಬ್ ರಜಿಸ್ಟ್ರರ್ ಕಛೇರಿಯಲ್ಲಿಯೂ ಸಹಿ ಮಾಡಿಸಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನೀವು ಅವರಿಗೆ ದುಡ್ಡು ಕೊಡದೇ ದಿನಾಂಕ 16.02.2021 ರಂದು ರೂ.1 ಲಕ್ಷ ಹಾಗೂ ದಿಃ 17.02.2021 ರಂದು ರೂ.1 ಲಕ್ಷ ಮಂಜುನಾಥರವರಿಗೆ ಕರಾರಿನ ಬಾಬ್ತು ಫೋನ್ ಪೇ ಮೂಲಕ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೀವು ಉಳಿದ ಹಣವನ್ನು ಅವರಿಗೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಅವರು ಹಣದ ಅವಶ್ಯಕತೆ ಇದೆ ಎಂದು ಹೇಳಿದ್ದರಿಂದ ರೂ.2 ಲಕ್ಷ ಹೆಚ್ಚಿನ ಹಣವನ್ನು ಅಗ್ರಿಮೆಂಟ್ ಆದ ನಂತರ ಕೊಟ್ಟಿದ್ದು ಎಂದು ಉತ್ತರಿಸುತ್ತಾರೆ. ನೀವು ಹೆಚ್ಚಿಗೆ ಹಣ ಕೊಟ್ಟಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ.

ನಿಮ್ಮ ಬಳಿ ರೂ.15 ಲಕ್ಷ ಹಣ ಹೇಗೆ ಇತ್ತು ಎಂದರೆ ಸಾಕ್ಷಿ ನನಗೆ ನಲ್ಲಿಗಾನಹಳ್ಳಿಯಲ್ಲಿ ಸರ್ವೆ ನಂಃ 1/4 ರಲ್ಲಿ 4 ಎಕರೆ 8 ಗುಂಟೆ ಇತ್ತು ಆ ಜಮೀನ್ನು ಡಿಸೆಂಬರ್ 2020 ರಲ್ಲಿ ನಾನು ನನ್ನ ಸಹೋದರ ಸಹೋದರಿಯರು ಮತ್ತು ತಂದೆ ತಾಯಿ, ದೊಡ್ಡಮ್ಮಂದಿರು ಮತ್ತು ಅವರ ಮಕ್ಕಳು ಎಲ್ಲರೂ ಸೇರಿ ಮಾರಾಟ ಮಾಡಿದ್ದು ಅದರಿಂದ ದುಡ್ಡು ಬಂದಿತ್ತು ಎಂದು ಉತ್ತರಿಸುತ್ತಾರೆ. ಸದರಿ ಜಮೀನಿನಲ್ಲಿ 3 ಭಾಗ ಇದ್ದು, ನಮ್ಮ ತಂದೆಯ ಭಾಗದ 4 ಎಕರೆ 8 ಗುಂಟೆ ಜಮೀನನ್ನು ಮಾತ್ರ ರೂ.18 ಲಕ್ಷಗಳಿಗೆ ಮಾರಾಟ ಮಾಡಿದ್ದೆವು. ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಜಮೀನು ಬಂಡೆಪ್ಪ ಎನ್ನುವವರಿಗೆ ಮಾರಾಟ ಮಾಡಿರುತ್ತೇವೆ. ಬಂಡೆಪ್ಪರವರು ರೂ.18 ಲಕ್ಷಗಳ ನಗದು ಹಣ ಕೊಟ್ಟಿದ್ದರು. ಸದರಿ ಹಣವನ್ನು ಮನೆಯಲ್ಲಿಯೇ ಇಟ್ಟುಕೊಂಡಿದ್ದೆವು ಕೋರೋನಾ ಇದ್ದ ಕಾರಣ ಬ್ಯಾಂಕಗಳು ಕೆಲಸ ನಿರ್ವಹಿಸುತ್ತಿರಲಿಲ್ಲ. ದಿಃ 08.02.2021 ರಂದು ಕೋರೋನಾ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಬ್ಯಾಂಕ್ ಮತ್ತು ಇತರೆ ಸರಕಾರಿ ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದವಾ ಎಂದರೆ

ಸಾಕ್ಷಿ ವಾರಕ್ಕೆ 3 ದಿನ ಈ ರೀತಿ ಕೆಲಸ ನಿರ್ವಹಿಸುತ್ತಿದ್ದವು ಆ ವೇಳೆಗೆ ಕೋರೋನಾ ಮುಗಿಯುತ್ತಾ ಬಂದಿತ್ತು ಎಂದು ಉತ್ತರಿಸುತ್ತಾರೆ. ಸದರಿ ರೂ.18 ಲಕ್ಷಗಳಲ್ಲಿ ನೀವು ನಿಮ್ಮ ದೊಡ್ಡಮ್ಮಂದಿರ ಭಾಗವನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ, ಒಟ್ಟು 12 ಎಕರೆ ವಿಸ್ತೀರ್ಣದಲ್ಲಿ ನಮ್ಮ ಭಾಗದ 4 ಎಕರೆ 8 ಗುಂಟೆ ಮಾತ್ರ ಮಾರಾಟ ಮಾಡಿದ್ದೆವು ಎಂದು ಉತ್ತರಿಸುತ್ತಾರೆ. ಆ ಮಾರಾಟದಲ್ಲಿ ನಿಮಗೆ ರೂ18 ಲಕ್ಷ ಬಂದಿಲ್ಲ, ನಿಮ್ಮ ಬಳಿ ದುಡ್ಡು ಇರಲಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

ಕರಾರು ನೋಂದಣಿ ನಂತರ ನೀವು ಕ್ರಯಪತ್ರ ನೋಂದಣಿ ಮಾಡಿಕೊಡುವಂತೆ ಮಂಜುನಾಥರವರನ್ನು ಎಷ್ಟು ಸಾರಿ ಕೇಳಿದ್ದೀರಿ ಎಂದರೆ ಸಾಕ್ಷಿ ನಾನು ಕೇಳಿದ್ದೇನೆ ಅವರು ಪೋನ್ ಸ್ವೀಚ್ ಆಫ್ ಮಾಡಿಕೊಳ್ಳುತ್ತಿದ್ದರು, ನಂತರ ನಾನು ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದು ಉತ್ತರಿಸುತ್ತಾರೆ. ನೀವು ಮಂಜುನಾಥರವರನ್ನು ಖುದ್ದು ಬೇಟಿ ಮಾಡಿ ಕೇಳಿದ್ದೀರಾ ಎಂದರೆ ಸಾಕ್ಷಿ ಹೌದು ಒಂದುಸಾರಿ ಚಿತ್ರದುರ್ಗಕ್ಕೆ ಹೋಗಿ ಬೇಟಿ ಮಾಡಿ ಕೇಳಿದ್ದೇನೆ ಎಂದು ಉತ್ತರಿಸುತ್ತಾರೆ. ಆಗ ಏನು ಹೇಳಿದರು ಎಂಬ ಪ್ರಶ್ನೆಗೆ ಸಾಕ್ಷಿ ಖಾತಾ ಆಗಿಲ್ಲ ಎಲ್ಲಾ ಮಾಡಿಸಿಕೊಂಡು ಮಾಡಿಕೊಡುತ್ತೇನೆ ಎಂದು ಹೇಳುತ್ತಾ ಬಂದರು ಎಂದು ಉತ್ತರಿಸುತ್ತಾರೆ. ಸಾವಿತ್ರಮ್ಮನವರ ಬಳಿ ಕೇಳಿದ್ದೀರಾ ಎಂದರೆ ಸಾಕ್ಷಿ ಅವರು ಬೆಂಗಳೂರಿನಲ್ಲಿ ಇರುವ ಅವರ ಮಗಳು ಚಂದ್ರಿಕಾ ರವರ ಬಳಿ ಇದ್ದಾರೆ, ಅವರಿಗೆ ಪೋನ್ ಮಾಡಿ ಕೇಳಿದೆ ಅದಕ್ಕೆ ಸಾವಿತ್ರಮ್ಮನವರು ಮಾಡಿಸಿಕೊಡುತ್ತೇವೆ ಮಂಜುನಾಥರವರಿಗೆ ಹೇಳುತ್ತೇವೆ ಎಂದು ಹೇಳಿದರು ಎಂದು ಉತ್ತರಿಸುತ್ತಾರೆ. ನ್ಯಾಯಾಲಯಕ್ಕೆ ದಾವಾ ಹೂಡುವ ಮುಂಚೆಯೇ ವಕೀಲರ ಮೂಲಕ ಕಾನೂನು ತಿಳುವಳಿಕೆ ನೋಟಿಸ್ ಕೊಟ್ಟಿದ್ದೆನು. ನೀವು ಕಳುಹಿಸಿದ ನೋಟಿಸಿನಲ್ಲಿ ಅಗ್ರಿಮೆಂಟ್ ದಿಃ 09.02.2021 ಎಂದು ನಮೂದಿಸಿ ಕಳುಹಿಸಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ನೋಟಿಸನ್ನು ಚಿತ್ರದುರ್ಗದ ವಕೀಲರ ಮೂಲಕ ಕಳುಹಿಸಿದ್ದೀರಿ ಎಂದರೆ ಸಾಕ್ಷಿ ಹೌದು ನಾಗಭೂಷಣ ವಕೀಲರಿಂದ ಕಳುಹಿಸಿದ್ದೇನೆ ಎಂದು

ಉತ್ತರಿಸುತ್ತಾರೆ. ಸದರಿ ನಾಗಭೂಷಣ ವಕೀಲರಿಗೆ ನಾನು ಅಗ್ರಿಮೆಂಟ್ ನಕಲನ್ನು ಕೊಟ್ಟಿದ್ದೆನು. ಸದರಿ ನೋಟಿಸಿಗೆ ಪ್ರತಿವಾದಿಗಳು ವಕೀಲರ ಮೂಲಕ ರಿಪ್ಲೇ ನೋಟಿಸ್ ಕೊಟ್ಟಿದ್ದಾರೆ ಎಂದರೆ ಸರಿ. ನೋಟಿಸ್ ಜೊತೆ ಈ ರೀತಿ ಕ್ರಯಪತ್ರ ಬರೆದುಕೊಡಬೇಕಾಗುತ್ತದೆ ಎಂದು ಏನಾದರೂ ಡ್ರಾಫ್ಟ ಪ್ರತಿವಾದಿಗಳಿಗೆ ಕಳುಹಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ, ಅಗ್ರಿಮೆಂಟ್ ಕಾಪಿ ಕಳುಹಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನೋಟಿಸ್ ಜೊತೆ ರೂ.10 ಸಾವಿರಗಳ ಚೆಕ್ / ಡಿ ಡಿ ಏನಾದರೂ ಕಳುಹಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ನೋಟಿಸಿನಲ್ಲಿ ಸೂಚಿಸಿರುವ ದಿನಾಂಕದಂದು ಸಬ್ ರಜಿಸ್ಟ್ರರ್ ಕಛೇರಿಗೆ ಹೋಗಿ ಕಾದಿರುವ ಬಗ್ಗೆ ಏನಾದರೂ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಹೋಗಿರುತ್ತೇವೆ ಆದರೆ ದಾಖಲಾತಿ ಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ನೀವು ದಾವಾ ನಿವೇಶನ ಪಾವಗಡದ ಮುಖ್ಯರಸ್ತೆಗೆ ಹೊಂದಿಕೊಂಡಿದೆ ಎಂದರೆ ಸಾಕ್ಷಿ  ಮುಖ್ಯ ರಸ್ತೆಯಿಂದ ಅರ್ಧ ಕಿ.ಮೀ ಒಳಗೆ ಇದೆ ಎಂದು ಉತ್ತರಿಸುತ್ತಾರೆ. ಸದರಿ ಜಾಗದಲ್ಲಿ ಒಂದು ನಿವೇಶನ ರೂ.30 ಲಕ್ಷ ಬೆಲೆ ನಡೆಯುತ್ತಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈಗ ಎಷ್ಟು ಬೆಲೆ ನಡೆಯತ್ತಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತಾಗಿದ್ದು, ಅದರಲ್ಲಿ ಮಂಜುನಾಥರವರ ಸಹೋದರ ಸಹೋದರಿಯವರಿಗೂ ಹಕ್ಕು ಇದೆ, ಮಂಜುನಾಥರವರೊಬ್ಬರೇ ಮಾರಾಟ ಮಾಡಲು ಹಕ್ಕಿಲ್ಲ ಎಂದರೆ ಸಾಕ್ಷಿ ಜಿ ಪಿ ಎ ಬರೆದುಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಅಗ್ರಿಮೆಂಟ ಆದ ದಿನ ಅಂದರೆ ದಿಃ 08.02.2021 ರಂದು ನೀವು ಮಂಜುನಾಥರವರಿಗೆ ಯಾವುದೇ ಹಣ ಕೊಟ್ಟಿಲ್ಲ, ನೀವು ಮತ್ತು ಸಾಕ್ಷಿದಾರರು ಸೇರಿ ಅಗ್ರಿಮೆಂಟ್ ಸೃಷ್ಟಿ ಮಾಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೀವು ದುಡ್ಡು ಕೊಡದೇ ಇರುವ ಕಾರಣ ಮಂಜುನಾಥ ಮತ್ತು ಅವರ ತಾಯಿ ಕ್ರಯಪತ್ರ ಬರೆದುಕೊಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸಾಕ್ಷಿ ನಾನು ಮಂಜುನಾಥರವರಿಗೆ ದುಡ್ಡು ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ನಾನು ಸುಳ್ಳು ಕೇಸ್ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

OS 20/2022

PW-1

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.